೧೩೫೮(೧೬೪೦)

ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ಜೆ.ಸಿ. ಆಸ್ಪತ್ರೆಯಲ್ಲಿ ಪ್ರಸೂತಿ ತಜ್ಞರ ಹುದ್ದೆ ಖಾಲಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

ಆ) ಈ ಹುದ್ದೆಯಲ್ಲಿದ್ದ ವೈದ್ಯರು ವರ್ಗಾವಣೆಗೊಂಡ ನಂತರ ಈ ಹುದ್ದೆಗೆ ಈವರೆಗೆ ಎಷ್ಟು ವೈದ್ಯಾಧಿಕಾರಿಗಳನ್ನು ವರ್ಗಾಯಿಸಲಾಗಿತ್ತು. ಅವರುಗಳು ಕರ್ತವ್ಯದ ಮೇಲೆ ಏಕೆ ಹಾಜರಾಗಲಿಲ್ಲ.

ಇ) ಹೀಗೆ ಹಾಜರಾಗದ ವೈದ್ಯರ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು (ವಿವರ ನೀಡುವುದು)

ಈ) ಈ ಹುದ್ದೆಗೆ ಈಗ ಯಾರನ್ನಾದರೂ ನೇಮಕ ಮಾಡುವ ಆಲೋಚನೆ ಸರ್ಕಾರದ ಗಮನಕ್ಕಿದೆಯೆ?

ಡಾ: ಎ.ಬಿ.ಮಾಲಕ ರೆಡ್ಡಿ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಡಾ: ಎಂ.ಸಿ.ಮಾಲಿನಿ ಇವರು ದಿನಾಂಕ ೭-೧೧-೨೦೦೦ ರಂದು ಸಾರ್ವಜನಿಕ ಆಸ್ಪತ್ರೆ ತೀರ್ಥಹಳ್ಳಿ ಇಲ್ಲಿಂದ ಕರ್ತವ್ಯದಿಂದ ಬಿಡುಗಡೆ ಹೊಂದಿರುತ್ತಾರೆ. ಡಾ: ಶಶಿಕಲಾ ಇವರನ್ನು ದಿನಾಂಕ ೧೭-೧೦-೨೦೦೦ ರಂದು ಕೊಪ್ಪ ಸಾರ್ವಜನಿಕ ಆಸ್ಪತ್ರೆಯಿಂದ ತೀರ್ಥಹಳ್ಳಿ ಸಾರ್ವಜನಿಕ ಆಸ್ಪತ್ರೆಗೆ ವರ್ಗಾವಣೆ ಮಾಡಲಾಗಿದೆ. ಆದರೆ ಈ ಮಹಿಳಾ ವೈದ್ಯಾಧಿಕಾರಿ ಸದರಿ ಆಸ್ಪತ್ರೆಯಲ್ಲಿ ಇದುವರೆವಿಗೂ ಕಾರ್ಯ ವರದಿ ಮಾಡಿಕೊಂಡಿರುವುದಿಲ್ಲ.

ಇ) ಅವರ ವಿರುದ್ಧ ಕ್ರಮ ಜರುಗಿಸಲಾಗುವುದು.

ಈ) ಜಿಲ್ಲೆಯಲ್ಲಿ ಖಾಲಿ ಇರುವ ತಜ್ಞ ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ತೀರ್ಥಹಳ್ಳಿ ಜೆ.ಸಿ.ಆಸ್ಪತ್ರೆಗೆ ಸಿಬ್ಬಂದಿ ಹುದ್ದೆಗಳನ್ನು ತುಂಬುವುದು.

೧೩೫೯(೧೬೪೨)

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ಜೆ.ಸಿ. ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿದ ನಂತರದಲ್ಲಿ ಮಂಜೂರಾಗಿರುವ ವಿವಿಧ ದರ್ಜೆಯ ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಆ) ಈ ಪೈಕಿ ಎಷ್ಟು ಸಿಬ್ಬಂದಿಗಳನ್ನು ಭರ್ತಿ ಮಾಡಲಾಗಿದೆ?

ಇ) ಹಾಸಿಗೆಗಳ ಅನುಪಾತಕ್ಕೆ ಸರಿಯಾಗಿ ಸಿಬ್ಬಂದಿವರ್ಗ ಇದೆಯೆ?

ಈ) ಹಾಗಿಲ್ಲದಿದ್ದಲ್ಲಿ ಉಳಿದ ಹುದ್ದೆಗಳನ್ನು ಮಂಜೂರು ಮಾಡಿ ಯಾವಾಗ ತುಂಬಲಾಗುವುದು?

ಡಾ: ಎ.ಬಿ.ಮಾಲಕ ರೆಡ್ಡಿ: (ಸಚಿವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ):

ಅ) ಸಿಬ್ಬಂದಿಗಳ ಸಂಖ್ಯೆ ೭

ಆ) ಕೆಲಸ ನಿರ್ವಹಿಸುತ್ತಿರುವವರು ೩.

ಇ) ಇದೆ.

ಈ) ಉದ್ಭವಿಸುವುದಿಲ್ಲ

ಸರ್ಕಾರಿ ಶಾಲೆಗಳಿಗೆ ಕಂಪ್ಯೂಟರ್ ಸರಬರಾಜು.

೧೩೬೦(೧೬೪೬)

ಶ್ರೀ ಆರಗ ಜ್ಞಾನೇಂದ್ರ(ತಿರ್ಥಹಳ್ಳಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ಮತ್ತು ಹೊಸ ನಗರ ತಾಲ್ಲೂಕಿನಲ್ಲಿ ಕಂಪ್ಯೂಟರ್ ಶಿಕ್ಷಣಕ್ಕಾಗಿ ಎಷ್ಟು ಶಾಲೆಗಳನ್ನು ಆಯ್ಕೆ ಮಾಡಲಾಗಿದೆ, ಅವುಗಳು ಯಾವುವು?

ಆ) ಕಂಪ್ಯೂಟರ್ ಕೇಂದ್ರಗಳಿಗೆ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ?